ಓ ಎಸ್ಃ 229/2016

ಪಿ ಡಬ್ಲ್ಯೂ ಃ 1

ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಕೆ ವಕೀಲರಿಂದಃ

ದಾವೆ ಹಾಕಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನು ಮತ್ತು ಎಲ್ಲ ವಾದಿಗಳು ನೀಡಿರುತ್ತೇವೆ. ಎಲ್ಲ ವಾದಿಗಳ ಪರವಾಗಿ ಸಾಕ್ಷಿ ನುಡಿಯುವ ಜವಾಬ್ದಾರಿಯನ್ನು ನಾನೇ ತೆಗೆದುಕೊಂಡಿರುವುದರಿಂದ ಅವರ ಪರವಾಗಿ ನಾನೇ ಸಾಕ್ಷಿ ಹೇಳುತ್ತೇನೆ ಮತ್ತು ಅವರನ್ನು ವಿಚಾರಣೆ ಮಾಡುವುದಿಲ್ಲ. ನಾನು ಎಲ್ಲ ವಾದಿಗಳ ಪರವಾಗಿ ವಾದಪತ್ರಕ್ಕೆ verifying affidavit ನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ.

ಪ್ರತಿವಾದಿ 1 ರವರು ಹುಟ್ಟಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರವರಿಗೆ 72 ವರ್ಷ ಎಂದು ನಮ್ಮ ಅಕ್ಕ ಮೊದಲು ಹುಟ್ಟಿದ ಕಾರಣ ಅದರ ಆಧಾರದ ಮೇಲೆ ಮತ್ತು ಊಹೆಯ ಮೇಲೆ ನಾನು ಹೇಳಿರುತ್ತೇನೆ. ವಾದಿ 2 ರವರಿಗೆ ಎಷ್ಟು ವರ್ಷ ಎಂದರೆ 70 ವರ್ಷಗಳಾಗಿರಬಹುದು. ನಾನು ದಿನಾಂಕಃ 08.06.1958 ರಲ್ಲಿ ಹುಟ್ಟಿರುತ್ತೇನೆ. ವಾದಿ ನಂಬರ್ 4 ರವರಿಗೆ 50 ವರ್ಷ ಆಗಿರಬಹುದು. ನಮ್ಮ ವಾದಿಗಳ ಎಲ್ಲರ ಆಧಾರಕಾರ್ಡ್ ಇರುತ್ತದೆ , ಅದನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ.

ನಮ್ಮ ತಂದೆ ನಮ್ಮ 5 ಜನ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಿದ್ದರು. ನಮ್ಮ 5 ಜನ ಹೆಣ್ಣು ಮಕ್ಕಳನ್ನು ನಮ್ಮ ತಂದೆ ಸರ್ಕಾರಿ ಕೆಲಸದಲ್ಲಿ ಇರುವವರಿಗೆ ನಮ್ಮನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಮದುವೆಯಾದ ಸಮಯದಲ್ಲಿ ಒಡವೆ ಮತ್ತು ಮದುವೆಯನ್ನು ವಿಜೃಂಭಣೆಯಿಂದ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆ ನಮ್ಮನ್ನು ಹುಟ್ಟು ಬಟ್ಟೆಯಲ್ಲಿ ಮದುವೆ ಮಾಡಿಸಿ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಅಕ್ಕ ಆಲಮೇಲಮ್ಮ ನವರ ಮದುವೆ ಯಾವಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಯು 1972 ರಲ್ಲಿ ಆಗಿರುತ್ತದೆ. ಆಲಮೇಲಮ್ಮ ನವರ ಮದುವೆ ಮತ್ತು ವಾದಿನಂಬರ್ 1 , 2 ಮತ್ತು 4 ಮದುವೆಯು ನನ್ನ ಮದುವೆಗಿಂತ ಮೊದಲು ಆಗಿರುತ್ತದೆ. ನಾವು 5 ಜನ ಹೆಣ್ಣು ಮಕ್ಕಳು ಮದುವೆಯಾದ ಮೇಲೆ ನಮ್ಮ ಗಂಡಂದಿರ ಮನೆಗಳಲ್ಲಿ ಇರುತ್ತೇವೆ.

ನಮ್ಮ ತಾಯಿಯವರು ಕನಕಪುರದ ಹತ್ತಿರ ದೊಡ್ಡಿ ಊರಿನವರಾಗಿರುತ್ತಾರೆ. ನನಗೆ 6 ಜನ ಸೋದರ ಮಾವಂದಿರು ಇರುತ್ತಾರೆ. ನಮ್ಮ ಸೋದರ ಮಾವಂದಿರಿಗೆ ಪ್ರತಿವಾದಿ 1 ಮತ್ತು 2ನೇ ವಾದಿಯನ್ನು ಕೊಟ್ಟು ಮದುವೆ ಮಾಡಿರುತ್ತಾರೆ.

ನಮ್ಮ ತಾತನ ಹೆಸರು ವೆಂಕಟರಾಮಯ್ಯ. ಅವರಿಗೆ 3 ಜನ ಗಂಡು ಮಕ್ಕಳಿದ್ದು, 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆ ಗೋವಿಂದಯ್ಯ ರವರ ಮದುವೆಯು ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಆಸ್ತಿ ಇತ್ತು. ನಮ್ಮ ತಾತನ ಆಸ್ತಿ ಅವರ ಕಾಲದಲ್ಲಿ ವಿಭಾಗವಾಗಿತ್ತೋ ಅಥವಾ ಅವರ ನಂತರ ವಿಭಾಗವಾಗಿರುತ್ತದೆ ನನಗೆ ಗೊತ್ತಿಲ್ಲ. ನಮ್ಮ ತಾತನ ಮೊದಲನೇ ಮಗ ಪಿಳ್ಳಯ್ಯ ಶೆಟ್ಟರು, 2ನೇಯವರು ಗೋವಿಂದಯ್ಯ, 3ನೇ ಯವರು ನಾರಾಯಣಶೆಟ್ಟಿ ಇರುತ್ತದೆ. ನನ್ನ ತಂದೆಯ ಅಣ್ಣ ತಮ್ಮಂದಿರಿಗೆ ಯಾವಾಗ ವಿಭಾಗವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಪಿತ್ರಾರ್ಜಿತ ಸ್ವತ್ತು ಎಂದು ಹೇಳಿರುವುದು ನನ್ನ ತಂದೆಯ ಭಾಗಕ್ಕೆ ಬಂದಿರುವ ಸ್ವತ್ತಾ ಅಥವಾ ತಂದೆ ಸಂಪಾದನೆ ಮಾಡಿರುವ ಸ್ವತ್ತಾ ಎಂದರೆ ಸಾಕ್ಷಿ ಎರಡು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸ.ನಂ. 155 ಇರುತ್ತದೆ . ನಾನು ಹೊಲದ ಹತ್ತಿರ ಹೋಗದೇ ಇರುವುದರಿಂದ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತು ಎಷ್ಟು ಐಟಂ ಗಳು ಇರುತ್ತವೆ ಎಂದರೆ ಗೊತ್ತಿಲ್ಲ. ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತಿನ ವಿಸ್ತೀರ್ಣ , ಚೆಕ್ ಬಂದಿ ನನಗೆ ಹೇಳಲಾಗುವುದಿಲ್ಲ. ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳ ಚೆಕ್ ಬಂದಿಯನ್ನು ಪೂರ್ಣವಾಗಿ ಹೇಳಲಾಗುವುದಿಲ್ಲ.

ಸ್ವಯಾರ್ಜಿತ ಸ್ವತ್ತುಗಳು ಎಷ್ಟು ಐಟಂಗಳು ಮತ್ತು ಪಿತ್ರಾರ್ಜಿತ ಸ್ವತ್ತುಗಳು ಎಷ್ಟು ಐಟಂಗಳು ಎಂದರೆ ನನಗೆ ಗೊತ್ತಿಲ್ಲ, ಅದಕ್ಕೆ ಕಾರಣ ನಾವು ಹೊಲದ ಹತ್ತಿರ ಹೋಗುತ್ತಿರಲಿಲ್ಲ. ಮದುವೆಯಾದ ಮೇಲೆ ನಾವು 5 ಜನ ಹೆಣ್ಣು ಮಕ್ಕಳು ಜಮೀನಿನ ಕಡೆ ಹೋಗಿರುವುದಿಲ್ಲ, ನೋಡಿರುವುದಿಲ್ಲ. ನಮ್ಮ ತಂದೆ ಗೋವಿಂದಯ್ಯ ನವರ 5 ಜನ ಮಕ್ಕಳು ಬೇರೆ ಬೇರೆ ಮನೆ ಮಾಡಿಕೊಂಡು ಇರುತ್ತಾರೆ. 5 ಜನ ಮಕ್ಕಳು ಅವರ ಹೆಂಡತಿ ಮತ್ತು ಅವರ ಮಕ್ಕಳೊಂದಿಗೆ ಬೇರೆ ಬೇರೆ ವಾಸವಿರುತ್ತಾರೆ ಎಂದರೆ ಸರಿ. ಮಾಗಡಿಯಲ್ಲಿ ಪ್ರತಿವಾದಿ 8 ರವರು ಇರುತ್ತಾರೆ. ಇನ್ನು 4 ಜನ ಮೋಟಗಾನಹಳ್ಳಿಯಲ್ಲಿ ವಾಸವಿರುತ್ತಾರೆ. ಮೋಟಗಾನಹಳ್ಳಿಯಲ್ಲಿ ಇರುವವರು ಯಾವ ಮನೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ಅವರು ನಮ್ಮ ತಂದೆಯ ಮನೆಯಲ್ಲಿ ಬೇರೆ ಬೇರೆಯಾಗಿ ಇರುತ್ತಾರೆ, ಆದರೆ ನಮಗೆ ಭಾಗವಾಗಿಲ್ಲ. ನಮ್ಮ ಸದರಿ ಮನೆಗಳು ಒಂದೇ ವಠಾರದಲ್ಲಿ ಇರುತ್ತವೆ. 5 ಜನ ಮಕ್ಕಳು ಯಾವ ಯಾವ ಜಮೀನುಗಳನ್ನು

ವ್ಯವಸಾಯ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ಅಣ್ಣ ತಮ್ಮಂದಿರ ಕುಟುಂಬದಲ್ಲಿ ಅವರ ಅವರ ಕುಟುಂಬದಲ್ಲಿ ಅವರೇ ಯಜಮಾನರಾಗಿರುತ್ತಾರೆ ಎಂದರೆ ಸರಿ. ನಮ್ಮ ಅಣ್ಣ ತಮ್ಮಂದಿರ ರೇಷನ್ ಕಾರ್ಡ್, ಮತದಾರರ ಚೀಟಿ ಇತ್ಯಾದಿ ದಾಖಲಾತಿಗಳು ಪ್ರತ್ಯೇಕವಾಗಿ ವಿಳಾಸವನ್ನು ಹೊಂದಿರುತ್ತವೆ ಎಂದರೆ ಸರಿ. ನಮ್ಮ ಅಣ್ಣ ತಮ್ಮಂದಿರ ಹೆಸರಿನಲ್ಲಿ ಖಾತೆ ಪಹಣಿ ಪ್ರತ್ಯೇಕವಾಗಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸಹಿ ಇಲ್ಲದೇ ಹೇಗೆ ಖಾತೆ ಬದಲಾವಣೆ ಮಾಡಿಕೊಳ್ಳುತ್ತಾರೆ ಎಂದು ಪ್ರಶ್ನೆ ಹಾಕುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಆರ್ ಕೆ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**